ಕೃಷ್ಣ ಕಾವೇರಿ ಬಗ್ಗೆ ಚರ್ಚಿಸಲು ಕಾಲನಿಗಧಿ, ಹಾಗೂ ಕಬಿನಿ ಭೂಸ್ವಾಧೀನ ಅಧಿಕಾರಿಗಳ ಕಾರ್ಯಾಲಯವನ್ನು ಜಪ್ತಿ ಮಾಡಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಕೃಷ್ಣಾ - ಕಾವೇರಿ ಬಗ್ಗೆ ಚರ್ಚೆಗೆ ತಾವು ಒಂದು ಕಾಲವನ್ನು ನಿಗದಿ ಮಾಡುತ್ತೇವೆ ಎಂದು ಹೇಳಿದ್ದೀರಿ.

ಅದು ಯಾವಾಗ ಎಂದು ತೀರ್ಮಾನ ಆಗಬೇಕು. ಮತ್ತೊಂದು ಭೂ ಸ್ವಾಧೀನ ಮಂಡಲಿಯನ್ನು ಜಪ್ತಿ ಮಾಡಿರೆತಕ್ಕ ವಿಚಾರ. ಇವತ್ತು ವರದಿ ಇನ್ನೂ ಕೊಟ್ಟಿಲ್ಲ. ಅದನ್ನು ಯಾವಾಗ ಕೊಡುವುದು ಏನು ಎಂದು ತಿಳಿಸಬೇಕು. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಚಾಮರಾಜ ನಗರ ಕಬಿನಿ ಭೂ ಸ್ವಾಧೀನ ಅಧಿಕಾರಿಗಳ ಕಾರ್ಯಾಲಯವನ್ನು ಜಪ್ತಿ ಮಾಡಿದ್ದಾರೆ. ಅಲ್ಲಿರತಕ್ಕ ರೈತರಿಗೆ ಚಾಮರಾಜ ನಗರ, ಗುಂಡ್ಲುಪೇಟೆ, ನಂಜನಗೂಡು, ಕೊಳ್ಳೇಗಾಲ ಈ ಕಬಿನಿ ಕೆಲಸಕ್ಕೆ ಯಾವ ಪ್ರದೇಶವನ್ನು ತೆಗೆದುಕೊಂಡರು. ಆ ರೈತರಿಗೆ ಹತ್ತಾರು ವರ್ಷಗಳಿಂದ ಹಣ ಕೊಡದೇ ಅವರು ಅಲೆಯುತ್ತಿದ್ದಾರೆ. ಅವರು ಹಣ ಕೊಡದೇ ಇರುವುದರಿಂದ ಕೋರ್ಟಿಗೆ ಹೋಗಿ ನಿಮ್ಮ ಸರ್ಕಾರದ ಕಾರ್ಯಾಲಯವನ್ನು ಜಪ್ತಿ ಮಾಡಿದ್ದಾರೆ. ತಾವು ಹೇಳುತ್ತೀರಿ, ನಮ್ಮ ಸರ್ಕಾರದಲ್ಲಿ ಹಣಕಾಸಿನ ಪರಿಸ್ಥಿತಿ ಸುಭದ್ರವಾಗಿದೆ ಎಂದು. ಅಲ್ಲಿ ಎರಡು ಕೋಟಿ ಐವತ್ತು ಲಕ್ಷ ರೂಪಾಯಿ ಕೊಡಬೇಕಾದ ಪರಿಸ್ಥಿತಿಯಲ್ಲಿ ನಾಲ್ಕು ಸಾರಿ ಜಪ್ತಿ ಆಗಿದೆ. ಮೊನ್ನೆಯೂ ಮೂರು ದಿವಸಗಳ ಹಿಂದೆ ಸಹ ಜಪ್ತಿ ಆಗಿದೆ. ಆದ್ದರಿಂದ ಹಣ ತೀರಿಸುವುದಕ್ಕೆ ತಾವು ಏನು ಮಾಡುತ್ತೀರಿ ಎಂದು ಹೇಳಬೇಕು.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಮತ್ತು ಮಾನ್ಯ ಬನ್ನಿಕೋಡ್ ಅವರ ವಿಚಾರದ ಬಗ್ಗೆ ಒಂದೊಂದಾಗಿ ಹೇಳಿಕೆ ಕೊಡುತ್ತಾರೆ. ಈಗ ಮಾನ್ಯ ಖರ್ಗೆಯವರು ಹೇಳಿಕೆ ಕೊಡುತ್ತಾರೆ.

ಸಚವರಿಂದ ಹೇಳಿಕೆ(ಗ್ರಾಮೀಣ ಪ್ರದೇಶದಲ್ಲಿ ಸಹಕಾರಿ ಸಾಲ ವಸೂಲಾತಿ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) : ಮಾನ್ಯ ಯಡಿಯೂರಪ್ಪನವರು ಎತ್ತಿದಂಥ ಒಂದು ಪ್ರಶ್ನೆಗೆ ಆಮೇಲೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದೆ. ಅದರ ಪ್ರಕಾರ ಇವತ್ತು ನಾನು ಆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಮಂತ್ರಿಗಳ ಹೇಳಿಕೆ

ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಿರುವ ಎಲ್ಲಾ ಹಣಕಾಸು ಸಂಸ್ಥೆಗಳ ವಸೂಲಾತಿ ಪ್ರಗತಿಯು ಕುಂಠಿತವಾಗಿದೆ. ದಿನಾಂಕ 30ನೇ ಜೂನ್ 1992ರಲ್ಲಿರುವಂತೆ ಬಾಕಿ ಇರುವ ವಸೂಲು ಮಾಡಬೇಕಾದ ಮೊತ್ತ ರೂ. 1201.16 ಕೋಟಿಗಳಾಗಿದೆ.

ಹಣಕಾಸು ಸಂಸ್ಥೆಗಳು	ದಿನಾಂಕ 30-6-92ಕ್ಕೆ ಆಗಿರುವ ಶೇಕಡಾವಾರು ವಸೂಲಾತಿ			
	1989	1990	1991	1992
ವಾಣಿಜ್ಯ ಬ್ಯಾಂಕುಗಳು	45	32	48	41.5
ಗ್ರಾಮೀಣ ಬ್ಯಾಂಕುಗಳು	59	40	49	51
ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್	57	17	36.5	48.6
ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್	49.2	46.7	34.2	38